# ಪ್ರಾಚೀನ ಬೌದ್ಧ ಧರ್ಮ

ಟಿ. ವಿಜಯಲಕ್ಷ್ಮಿ ಮುರಳೀಧರ್

ಬೌದ್ಧ ಧರ್ಮದ ಸ್ಥೂಲ ಪರಿಚಯವನ್ನು ಈ ಲೇಖನದ ಮೂಲಕ ಮಾಡಿಕೊಟ್ಟಿರುವವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಉನ್ನತ ವ್ಯಾಸಂಗ ಮಾಡುತ್ತಿದ್ದಾರೆ.

**ಬೌ**ದ್ಧ ಧರ್ಮವು ಭಗವಾನ್ ಬುದ್ಧನು ಜೀವನದ ವಾಸ್ತವಿಕತೆಯನ್ನು ಅರಿತು ಬೋಧಿಸಿದ ಧರ್ಮ. ಜೀವನದ ಸಮಸ್ಯೆಗಳನ್ನು ಸಮರ್ಪಕವಾಗಿ ಪರಿಹರಿಸಿಕೊಳ್ಳಲು ಬೇಕಾದ ಮಾರ್ಗವನ್ನು ಕಂಡುಕೊಳ್ಳುವ ಅನ್ವೇಷಣೆಯಿಂದ ಪ್ರಾರಂಭಗೊಂಡು ಚಿತ್ತಶುದ್ಧಿ, ಚಿತ್ತ ಮತ್ತು ಆತ್ಮಗಳ ಸ್ಥೈರ್ಯಗಳನ್ನು ಪ್ರತಿಪಾದಿಸುವ ಧರ್ಮ. ಈ ಮಹಾಧರ್ಮದ ಸ್ಥಾಪಕನ ಜನನ ಕ್ರಿ.ಪೂ. ಆರನೆಯ ಶತಮಾನದ ಮಧ್ಯ ಭಾಗದಲ್ಲಿ. ಈತನದು ಗೋತಮ ಅಥವಾ ಗೌತಮ ಎಂಬ ಪ್ರಾಚೀನ ರಾಜವಂಶ. ತಂದೆ ತಾಯಿಗಳಿಟ್ಟ ಹೆಸರು ಸಿದ್ಧಾರ್ಥ. 'ಬುದ್ಧ' ಎಂಬುದರ ಅರ್ಥ 'ಜ್ಞಾನ ಪಡೆದವನು' ಎಂದು. ಬದುಕೆಂಬ ಸ್ವಪ್ನದಿಂದ ವಾಸ್ತವತೆಯ ಪ್ರಜ್ಞೆಗೆ ಎಚ್ಚರಗೊಳ್ಳುವ ಬೋಧಿಯನ್ನು ಅವನು ಪಡೆದುದರ ಗುರುತಾಗಿ ಬಂದ ಹೆಸರು ಅದು. ಬೌದ್ಧ ಧರ್ಮವು ಬುದ್ಧನ ಉಪದೇಶದಿಂದ ಪ್ರಾರಂಭಗೊಂಡು, ವಿಶ್ವದಲ್ಲೆಲ್ಲಾ ವ್ಯಾಪಕವಾಗಿ ಹರಡಿ ವಿಶ್ವಧರ್ಮವಾಗಿ ಬೆಳೆಯಿತು.

ಬುದ್ಧನು ಯಾವ ಗ್ರಂಥಗಳನ್ನೂ ರಚಿಸಲಿಲ್ಲ. ಆದ್ದರಿಂದ ಅವನ ಉಪದೇಶದ ವಿಷಯದಲ್ಲಿ ಸ್ವಲ್ಪ ಅಸ್ಪಷ್ಟತೆ ಇದೆ. ಬುದ್ಧನು ಹೇಳಿದನೆಂದು ಆತನ ಶಿಷ್ಯರು ಸಂಗ್ರಹಿಸಿರುವ ವಿಷಯಗಳೇ ನಮಗೆ ಈಗ ದೊರಕುವ ಆಧಾರ. ಆತನ ಶಿಷ್ಯರಲ್ಲೇ ಆತನ ಬೋಧನೆಯ ವಿಷಯದಲ್ಲಿ ಅಭಿಪ್ರಾಯ ಭೇದವಿದೆ. ಪ್ರಾಚೀನ ಬೌದ್ಧಧರ್ಮವನ್ನು ಕುರಿತ ಮಾಹಿತಿಗೆ ಆಧಾರವಾಗಿರುವ ಈ ಪ್ರಾಚೀನ ಕೃತಿಗಳು ಪಾಲಿ ಭಾಷೆಯಲ್ಲಿವೆ. ಬುದ್ಧನ ಬೋಧನೆಗಳನ್ನು ಮೂರು ಸಂಪುಟಗಳಲ್ಲಿ ಸಂಗ್ರಹಿಸಲಾಗಿವೆ. ಇವುಗಳನ್ನು ಸುತ್ತ, ವಿನಯ ಮತ್ತು ಅಭಿಧಮ್ಮ ಪಿಟಕಗಳೆಂದು ಕರೆಯುತ್ತಾರೆ. ಬುದ್ಧನ ಹೇಳಿಕೆಗಳು ಸುತ್ತಪಿಟಕದಲ್ಲಿದ್ದರೆ, ಶಿಸ್ತು ಕಟ್ಟಲೆಗಳು ವಿನಯದಲ್ಲಿ ಮತ್ತು ತಾತ್ವಿಕ ಚರ್ಚೆಗಳು ಅಭಿದಮ್ಮದಲ್ಲಿ ಇವೆ.

ಬುದ್ಧನ ಬೋಧನೆಗಳ ಮತ್ತು ವಿಚಾರಗಳ ಬಗ್ಗೆ ಹಲವಾರು ಕಡೆ ವ್ಯತ್ಯಾಸಗಳು, ಸಂದೇಹಗಳಿದ್ದರೂ ಒಂದು ವಿಷಯದ ಬಗ್ಗೆ ಎಲ್ಲರಲ್ಲೂ ಸಮ್ಮತವಿದೆ. ಅದೇ ಚತುರಾರ್ಯ ಸತ್ಯಗಳು. ಬುದ್ಧನದು ಅನುಷ್ಠೇಯ ಮಾರ್ಗ. ಆತನ ಮಾರ್ಗವನ್ನು ಮಧ್ಯಮಮಾರ್ಗವೆಂದು ಕರೆಯುತ್ತಾರೆ. ಆತನು ಜನರಿಗೆ ನೀಡಿದ ಅನುಷ್ಠೇಯ ಬೋಧನೆಗಳಿಗೆ **ಆರ್ಯಸತ್ಯಗಳೆಂ**ದು ಹೆಸರು. ಜಗತ್ತಿನಲ್ಲಿ ಸಾಮಾನ್ಯ ಜನರಿಗೆ ಬೇಕಾದುದು ಶಾಂತಿ



ಸಾರನಾಥದ ಬೌದ್ಧಪ್ರತಿಮೆ

ಸಮಾಧಾನಗಳಿಂದ ಕೂಡಿದ ಜೀವನವೇ ಹೊರತು, ಈ ಜಗತ್ತು, ಅದರ ಸ್ವರೂಪ ಮತ್ತು ಅದರ ಕಾರಣ, ಆ ಕಾರಣಕ್ಕೂ ಆತ್ಮಕ್ಕೂ ಇರುವ ಸಂಬಂಧಗಳ ಜ್ಞಾನವಲ್ಲ. ಬುದ್ಧನಿಗೆ ಒಣ ತಾತ್ತ್ವಿಕ ಚರ್ಚೆಯಲ್ಲಿ ನಂಬಿಕೆ ಇರಲಿಲ್ಲ.

ಬೌದ್ಧ ಚಿಂತನೆಯಲ್ಲಿ ವಿಶಿಷ್ಟವಾದ ಕೆಲವು ಸಾಮಾನ್ಯ ಲಕ್ಷಣಗಳುಂಟು. ಜೀವನವು ದುಃಖದಿಂದ ತುಂಬಿದೆ—ನಿರಾಶಾವಾದವೆಂದು ಪರಿಗಣಿಸಲಾದ ಇದೇ ಆರ್ಯಸತ್ಯದ ಮೊದಲ ಲಕ್ಷಣ. ಜಗತ್ತು ಮೊದಲು ಕಾಣಿಸಿಕೊಂಡಾಗಿನಿಂದ ಹರಿದಿರುವ ಕಣ್ಣೀರಿನ ಪ್ರವಾಹವನ್ನು ಎಲ್ಲ ಸಾಗರಗಳ ಜಲ ರಾಶಿಗೂ ಕೂಡ ಹೋಲಿಸಲು ಸಾಧ್ಯವಿಲ್ಲ. ಜೀವನವು ದುಃಖ ಮತ್ತು ಕೆಡುಕಿನಿಂದ ಕೂಡಿದೆ ಎಂದು ಹೇಳುವಾಗ ಬುದ್ಧನು ಬದುಕಿನ ಕಠಿಣ ವಾಸ್ತವತೆಯನ್ನು ನಮಗೆ ತಿಳಿಸಲು ಪ್ರಯತ್ನಿಸುತ್ತಾನೆ. ಬುದ್ಧಿ, ಇಂದ್ರಿಯಗಳಿಗೆ ಮತ್ತು ಸಾಮಾನ್ಯ ಅನುಭವಕ್ಕೆ ವ್ಯಕ್ತವಾದುದನ್ನು ಮಾತ್ರ ಆತನು ಸ್ವೀಕರಿಸಿದ. ಬುದ್ಧನು ತನ್ನ ಬೋಧನೆಗಳಲ್ಲಿ ಅತೀಂದ್ರಿಯ ವಿಷಯಗಳನ್ನು ಪ್ರಸ್ತಾಪಿಸಿರುವುದು ಹೌದು. ಆದರೆ, ಅವನು ಹಾಗೆ ಮಾಡುವುದು ಜನರೊಂದಿಗೆ ಅಂದಿನ ಭಾಷೆಯಲ್ಲಿ ಸ್ಪಂದಿಸ

ಲೆಂದು ಮಾತ್ರ. ಆತನು ಅತೀಂದ್ರಿಯ ವಿಷಯಗಳನ್ನು ಒಪ್ಪುವ ನೆಂಬುದು ಇದರ ಅರ್ಥವಲ್ಲ.

ಬುದ್ಧನ ಎರಡನೇ ಆರ್ಯಸತ್ಯವು ದುಃಖದ ಕಾರಣವನ್ನು ವಿವರಿಸುತ್ತದೆ. ಬುದ್ಧನ ಪ್ರಕಾರ ಜಗತ್ತಿನಲ್ಲಿರುವ ಪ್ರತಿಯೊಂದು ವಸ್ತುವಿಗೂ ಮತ್ತು ಜಗತ್ತಿನಲ್ಲಿ ಸಂಭವಿಸುವ ಪ್ರತಿಯೊಂದು ಘಟನೆಗೂ ಅನೇಕ ಕಾರಣಗಳಿವೆ. ಯಾವ ಘಟನೆಗೂ ಕಾರಣವಿಲ್ಲದಿಲ್ಲ ಅಥವಾ ಅದು ನಿರುಪಾಧಿಕವಲ್ಲ. ಬುದ್ಧನ ಈ ನಿಲುವಿಗೆ ಪ್ರತೀತ್ಯ ಸಮುತ್ಪಾದವೆಂದು ಹೆಸರು. ಇದರ ಅರ್ಥ "ಇದು ಇರುವುದರಿಂದ ಅದು, ಇದಿಲ್ಲದೆ ಅದಿಲ್ಲ" ಎಂದು. ಎಂದರೆ ಜಗತ್ತಿನ ಪ್ರತಿಯೊಂದು ವಸ್ತುವು ಕೆಲವು ಉಪಾಧಿಗಳನ್ನು ಅವಲಂಬಿಸಿರುತ್ತದೆ. ಈ ಉಪಾಧಿಗಳಿಲ್ಲದೆ ವಸ್ತುಗಳಿರಲು ಸಾಧ್ಯವಿಲ್ಲ. ನಮ್ಮ ಬದುಕಿನಲ್ಲಿ ಕಾಣಬರುವ ದುಃಖಕ್ಕೂ ಒಂದು ಉಪಾಧಿ ಇದೆ. ಅದೇ ಬುದ್ಧನ ಪ್ರಕಾರ ಅವಿದ್ಯೆ ಅಥವಾ ಅಜ್ಞಾನ. ಆತ್ಮವು ಸ್ಥಿರವೆಂಬ ಭಾವನೆಯೇ ಬುದ್ಧನ ಪ್ರಕಾರ ಅಜ್ಞಾನ. ಈ ಆತ್ಮವೆಂಬುದು ದೇಹ ಮತ್ತು ಮನಸ್ಸುಗಳ ಒಂದು ಸಂಘಾತ ಅಥವಾ ಸಮೂಹ. ಬುದ್ಧನು ದೇಹವನ್ನು ರೂಪವೆಂದು, ಮನಸ್ಸನ್ನು ನಾಮವೆಂದು ಕರೆಯುತ್ತಾನೆ. ನಾಮವು ಪುನಃ ವೇದನಾ, ಸಂಜ್ಞಾ, ಸಂಸ್ಕಾರ ಮತ್ತು ವಿಜ್ಞಾನ ಎಂಬ ನಾಲ್ಕು ಅಂಶಗಳನ್ನು ಒಳಗೊಂಡಿದೆ. ಒಟ್ಟಾರೆ ಆತ್ಮವೆಂಬುದು ದೇಹ, ವೇದನಾ, ಸಂಜ್ಞಾ, ಸಂಸ್ಕಾರ ಮತ್ತು ವಿಜ್ಞಾನವೆಂಬ ಐದು ಅಂಶಗಳ ಒಂದು ಮೊತ್ತ. ಈ ಮೊತ್ತವನ್ನು ಒಂದುಗೂಡಿಸುವ ಸ್ಥಿರವೂ, ಚೇತನಾತ್ಮಕವೂ ಆದ ಬೇರೊಂದು ಆತ್ಮವೆಂಬ ತತ್ತ್ವವಿಲ್ಲ. ನಾವು ಅಶಾಶ್ವತವೆಂದು ತಿಳಿಯದಿರುವುದು ಮತ್ತು ಶಾಶ್ವತವಾದ ಆತ್ಮವೆಂಬುದು ಇದೆ ಎಂದು ಭಾವಿಸಿರುವುದರಿಂದಲೇ ನಮಗೆ ದುಃಖ ಉಂಟಾಗುವುದು. ಒಟ್ಟಾರೆ ನಮ್ಮ ದುಃಖಕ್ಕೆ ನಮ್ಮ ಅವಿದ್ಯೆ ಅಥವಾ ಅಜ್ಞಾನವೇ ಕಾರಣ. ಈ ಅಜ್ಞಾನವು ಹೇಗೆ ಕೆಡುಕನ್ನು ಉಂಟುಮಾಡುತ್ತದೆ ಎಂಬುದನ್ನು ಅಜ್ಞಾನದ ಕಾರ್ಯ ಪ್ರಕ್ರಿಯೆಯ ಮೂಲಕ ಅವನು ಸೂಚಿಸುತ್ತಾನೆ. ಈ ಪ್ರಕ್ರಿಯೆಯು ಹನ್ನೆರಡು ಕೊಂಡಿಗಳಿಂದ ಕೂಡಿದುದು (ದ್ವಾದಶ ನಿದಾನ). ಆ ಕೊಂಡಿಗಳು ಅಜ್ಞಾನ ಹಾಗೂ ಕರ್ಮ (ಸಂಸ್ಕಾರ), ಪ್ರಜ್ಞೆ (ವಿಜ್ಞಾನ), ನಾಮ ಮತ್ತು ರೂಪ (ನಾಮ ರೂಪ), ಪಂಚೇಂದ್ರಿಯಗಳು, ಆ ಇಂದ್ರಿಯ ವಿಷಯಗಳು ಮತ್ತು ಮನಸ್ಸು (ಷಡಾಯತನ), ಇಂದ್ರಿಯಗಳು ಮತ್ತು ಅವುಗಳ ವಿಷಯಗಳಿಗೆ ಇರುವ ಸಂಪರ್ಕ (ಸ್ಪರ್ಶ), ಸಂವೇದನೆ (ವೇದನಾ), ಬಯಕೆ (ತೃಷ್ಣೆ), ಬದುಕಿಗೆ ಅಂಟಿಕೊಂಡಿರುವುದು (ಉಪಾದಾನ), ಇರವು (ಭವ), ಪುನರ್ಜನ್ಮ (ಜಾತಿ) ಹಾಗೂ ಮುಪ್ಪು ಮತ್ತು ಸಾವು. ಈ ಸರಪಣಿಯು ಪ್ರಸ್ತುತ ಜೀವನಕ್ಕಷ್ಟೇ ಅಲ್ಲದೆ, ಹಿಂದಿನ ಮತ್ತು ಮುಂದಿನ ಜೀವನಕ್ಕೂ ಅನ್ವಯಿಸುತ್ತದೆ. ಎಂದರೆ ಈ ಸರಪಣಿಯು ಭೂತ, ವರ್ತಮಾನ ಮತ್ತು ಭವಿಷ್ಯ ಜನ್ಮಗಳಿಗೆ ಸಂಬಂಧಿಸಿದ್ದು. ಅದೇ ಸಂಸಾರ ಅಥವಾ ನಿರಂತರ ಹುಟ್ಟು ಸಾವುಗಳಿಗೆ ಕಾರಣ. ಈ ಸರಪಣಿಯಲ್ಲಿ ಬರುವ ಕೆಲವು ಶಬ್ದಗಳ ಬಗ್ಗೆ ಭಿನ್ನಾಭಿಪ್ರಾಯವಿದೆಯಾದರೂ ನಾವು ಇಷ್ಟನ್ನು ಹೇಳಬಹುದು: ಅವಿದ್ಯೆ ಮತ್ತು ಕರ್ಮಗಳು ಹಿಂದಿನ ಜನ್ಮಕ್ಕೆ ಅನ್ವಯವಾಗುತ್ತವೆ. ಮನುಷ್ಯನು ಅಜ್ಞಾನದಿಂದ ಪ್ರೇರಿತನಾಗಿ ಕರ್ಮಗಳನ್ನು ಮಾಡುತ್ತಾನೆ. ಇದರ ಪರಿಣಾಮವಾಗಿ ಅವನು ಪುನಃ ಜನಿಸುತ್ತಾನೆ. ಮುಂದಿನ ಎಂಟು ಕೊಂಡಿಗಳು ಮನುಷ್ಯನ ಬದುಕಿನ ವಿವಿಧ ಅನುಭವಗಳಿಗೆ ಸಂಬಂಧಿಸಿವೆ. ಈ ಅನುಭವಗಳಿಗೆ ಅನುಗುಣವಾಗಿಯೇ ಜೀವಿಯು ಬೆಳೆಯುತ್ತಾನೆ. ಕೊನೆಯ ಎರಡು ಕೊಂಡಿಗಳು ಮನುಷ್ಯನಿಗೆ ಅನಿವಾರ್ಯವಾಗಿರುವ ಮುಂದಿನ ಜನ್ಮವನ್ನು ಮತ್ತು ಅಲ್ಲಿ ಅವನಿಗೆ ಕಾದಿರುವ ದುಃಖವನ್ನು ಸೂಚಿಸುತ್ತವೆ. ವ್ಯಕ್ತಿಯ ಅಸ್ತಿತ್ವಕ್ಕೆ ಅಜ್ಞಾನವೇ ಮೂಲ ಕಾರಣ. ಅಜ್ಞಾನದಿಂದ ಆಸೆ ಹುಟ್ಟುತ್ತದೆ. ಆಸೆಯಿಂದ ಮನುಷ್ಯನು ಕರ್ಮವನ್ನು ಮಾಡುತ್ತಾನೆ. ತನ್ಮೂಲಕ ಅದರ ಫಲಗಳನ್ನು ಅನುಭವಿಸಲು ಪುನಃ ಹುಟ್ಟುತ್ತಾನೆ. ಪುನಃ ಹುಟ್ಟು, ಆಸೆ, ಕರ್ಮ ಎಂಬ ವಿಷ ವರ್ತುಲಕ್ಕೆ ಸಿಲುಕುತ್ತಾನೆ.

ಕೊನೆಯ ಆರ್ಯಸತ್ಯವು ದುಃಖನಿವಾರಣೆಯ ಮಾರ್ಗವನ್ನು ಸೂಚಿಸುತ್ತದೆ. ಮನುಷ್ಯನು ಅಜ್ಞಾನವನ್ನು ನಾಶಪಡಿಸಲು ಎಂಟು ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು. ಈ ಮೌಲ್ಯಗಳು ಭೌತಿಕ ಮತ್ತು ಆಧ್ಯಾತ್ಮಿಕ ಎರಡನ್ನೂ ಒಳಗೊಂಡಿವೆ. ಇವುಗಳನ್ನು ಒಟ್ಟಾಗಿ ಆರ್ಯ ಅಷ್ಟಾಂಗ ಮಾರ್ಗ ಎಂದು ಕರೆಯುತ್ತಾರೆ. ಅಪೇಕ್ಷಿತ ಗುರಿಯನ್ನು ಸಾಧಿಸಲು ಮನುಷ್ಯನು ಅಳವಡಿಸಿಕೊಳ್ಳಬೇಕಾದ ಆತ್ಮಸಂಸ್ಕಾರದ ಪಥಗಳು ಇವು. ಈ ಮೌಲ್ಯಗಳು:

**ಸರಿಯಾದ ಶ್ರದ್ಧೆ, ಸರಿಯಾದ ಸಂಕಲ್ಪ, ಸರಿಯಾದ ನುಡಿ, ಸರಿಯಾದ ನಡೆ, ಸರಿಯಾದ ಬದುಕು, ಸರಿಯಾದ ಪ್ರಯತ್ನ, ಸರಿಯಾದ ಚಿಂತನೆ ಮತ್ತು ಸರಿಯಾದ ಧ್ಯಾನ.**

ಈ ಎಲ್ಲ ಮೌಲ್ಯಗಳನ್ನೂ ಪ್ರಜ್ಞಾ, ಶೀಲ ಮತ್ತು ಸಮಾಧಿ ಎಂಬ ಮೂರು ಮೌಲ್ಯಗಳ ಚೌಕಟ್ಟಿನಲ್ಲಿ ಕ್ರೋಡೀಕರಿಸಬಹುದು. ನಾಲ್ಕು ಆರ್ಯಸತ್ಯಗಳ ಸರಿಯಾದ ಜ್ಞಾನವೇ ಪ್ರಜ್ಞಾ. ಆದರೆ ಪ್ರಜ್ಞೆಯು ಅರ್ಥಪೂರ್ಣವಾಗುವುದು ಅನುಭವದ ಹಿನ್ನೆಲೆಯಲ್ಲಿ ಮಾತ್ರ ಅಂದರೆ ಪ್ರಜ್ಞೆಯು ಬರಿಯ ಬೌದ್ಧಿಕ ಶ್ರದ್ಧೆಯಾಗಿರಬಾರದು, ಅದು ಅನುಭವ-ಜನ್ಯವಾಗಿರಬೇಕು. ಒಟ್ಟಾರೆ ಅನುಭವದಿಂದ ಉದಿಸುವುದೇ ಪ್ರಜ್ಞೆ. ಈ ಹಿನ್ನೆಲೆಯಲ್ಲಿ ಬುದ್ಧನು ತನ್ನ ಅಭಿಪ್ರಾಯಗಳ ಮೌಢ್ಯ ಸ್ವೀಕಾರವನ್ನು ಒಪ್ಪಿಕೊಳ್ಳಲಿಲ್ಲ. ಅವುಗಳನ್ನು ಭಿಕ್ಷುಗಳು ತಮ್ಮವ

ಸ್ಸಾಗಿ ಮಾಡಿಕೊಳ್ಳಬೇಕು ಎಂದು ಸಾರಿದ. ಸರಿ ತಪ್ಪುಗಳ ಅರಿವನ್ನು ಮನುಷ್ಯನು ಸ್ವಾನುಭವದಿಂದಲೇ ಪಡೆದು ಕೊಳ್ಳಬೇಕೆಂದ. ಈ ಹಿನ್ನೆಲೆಯಲ್ಲಿ ಕಿಸಾಗೌತಮಿಯ ಕಥೆ ಉಲ್ಲೇಖಾರ್ಹವಾದುದು. ಬುದ್ಧನ ಪ್ರಕಾರ ಮನುಷ್ಯನು ತನ್ನ ಮೋಕ್ಷವನ್ನು ತಾನೇ ಸಂಪಾದಿಸಿಕೊಳ್ಳಬೇಕು. ಅದು ಭಗವಂತನ ಕೃಪೆಯಿಂದಾಗಲಿ ಯಾವುದೇ ಬಾಹ್ಯವ್ಯಕ್ತಿಯ ಮಾರ್ಗದರ್ಶನದಿಂದಾಗಲಿ ದೊರೆಯುವಂತಹುದಲ್ಲ. ಗುರುವೂ ಕೂಡ ಕೇವಲ ದಾರಿಯನ್ನು ಮಾತ್ರ ತೋರಿಸಬಲ್ಲ.

ಪ್ರಜ್ಞೆಯು ಅಂತರಂಗ ಸತ್ಯವಾಗಬೇಕಿದ್ದರೆ ಶೀಲ ಮತ್ತು ಸಮಾಧಿಗಳು ಅಗತ್ಯ. ಶೀಲವೆಂದರೆ ಸರಿಯಾದ ನಡವಳಿಕೆ. ಇದು ಅಹಿಂಸೆ, ಸತ್ಯಸಂಧತೆ, ತೃಪ್ತಿ, ಮೊದಲಾದ ಗುಣಗಳನ್ನು ಒಳಗೊಂಡಿದೆ. ನಾಲ್ಕು ಸತ್ಯಗಳನ್ನು ಕುರಿತು ಧ್ಯಾನಿಸುವುದೇ ಸಮಾಧಿ. ಈ ಧ್ಯಾನವು ಉಪನಿಷತ್ತುಗಳಲ್ಲಿರುವಂತೆ ಅನೇಕ ವಿಧವಾದ ಯೌಗಿಕ ಅಭ್ಯಾಸಗಳನ್ನು ಒಳಗೊಂಡಿದೆ.

ಸಾಧನೆಯ ಬದುಕಿನಲ್ಲಿ ಬುದ್ಧನು ಜೈನರಂತೆ ಕಠಿಣತೆ ಯನ್ನು ವಿಧಿಸಲಿಲ್ಲ. ಅತಿಯಾದ ದೇಹದಂಡನೆ ಮತ್ತು ಅತಿ ಯಾದ ಭೋಗ, ಈ ಎರಡೂ ಅತಿರೇಕಗಳನ್ನು ತಿರಸ್ಕರಿಸಿ ಮಧ್ಯಮ ಮಾರ್ಗವನ್ನು ಬೋಧಿಸಿದ. ಆತನ ಪ್ರಕಾರ ಸಾಧನೆಗೆ ಯಶಸ್ಸು ದೊರೆಯುವುದು ಮಧ್ಯಮ ಮಾರ್ಗ ದಿಂದ ಮಾತ್ರ. ವೀಣೆಯ ತಂತಿಯು ತೀರ ಸಡಿಲವಾಗಿದ್ದರೆ ಅದು ಅಪಸ್ವರವನ್ನು ಹೊರಹೊಮ್ಮಿಸುತ್ತದೆ. ಹಾಗೆಯೇ ತೀರ ಬಿಗಿಯಾಗಿದ್ದರೆ, ಅದು ತುಂಡಾಗುವ ಸಂಭವವಿರುತ್ತದೆ. ವೀಣೆಯು ಸುಸ್ವರವನ್ನು ಹೊರಹೊಮ್ಮಿಸಬೇಕಿದ್ದರೆ ಅದರ ತಂತಿಯು ತೀರ ಬಿಗಿಯಾಗಿಯೂ ಇರಬಾರದು ಮತ್ತು ತೀರ ಸಡಿಲವಾಗಿಯೂ ಇರಬಾರದು. ಬುದ್ಧನು ಈ ಅಂಶ ವನ್ನು ತನ್ನ ಮೊದಲ ಪ್ರವಚನದಲ್ಲಿಯೇ ಹೇಳಿದ್ದಾನೆ.

ಬೌದ್ಧರು ಸಾಧನೆಯ ಗುರಿಯನ್ನು ನಿರ್ವಾಣ ಎಂದು ಕರೆಯುತ್ತಾರೆ. ಈ ಶಬ್ದದ ಅರ್ಥ "ನಂದಿಹೋಗುವುದು" ಎಂದು. ಇದನ್ನು ಕೆಲವೊಮ್ಮೆ ಶೂನ್ಯದ ಸ್ವರ್ಗ ಎಂದು ಕರೆಯ ಲಾಗಿದೆ. ಬೌದ್ಧರ ಪ್ರಕಾರ ವ್ಯಕ್ತಿಯು ಬದುಕಿರುವಾಗಲೇ ಈ ಸ್ಥಿತಿಯನ್ನು ಪಡೆಯಬಹುದು. ಇದು ಜೀವನ್ಮುಕ್ತಿ ಪರಿಕಲ್ಪನೆ ಯನ್ನು ಹೋಲುತ್ತದೆ. ಇದು ಸ್ವಾರ್ಥ ಮತ್ತು ರಾಗದ್ವೇಷ ಗಳೆಲ್ಲವೂ ನಂದಿಹೋದ ಸ್ಥಿತಿ. ಅಂತಹ ವ್ಯಕ್ತಿಯು ಪೂರ್ಣ ಶಾಂತಿ ಮತ್ತು ಸಮಚಿತ್ತಗಳಿಂದ ಕೂಡಿರುತ್ತಾನೆ. ಈ ನಿರ್ವಾಣ ಸ್ಥಿತಿಯನ್ನು ಪಡೆದವನನ್ನು **ಅರ್ಹಂತ** ಎಂದು ಕರೆಯುತ್ತಾರೆ. ಅರ್ಹಂತನೆಂದರೆ ಪೂರ್ಣನಾದವನು ಅಥವಾ ಪವಿತ್ರ ನಾದವನು ಎಂದರ್ಥ. ಬೌದ್ಧರ ಪ್ರಕಾರ ಇದು ಈ ಜನ್ಮದ ಚೌಕಟ್ಟಿನೊಳಗೆ ಮನುಷ್ಯನು ಸಾಧಿಸಬೇಕಾದ ಗುರಿ. ಇದಲ್ಲದೇ ನಿರ್ವಾಣವನ್ನು ಮತ್ತೊಂದು ಅರ್ಥದಲ್ಲೂ ಕಲ್ಪಿಸಿಕೊಳ್ಳ ಲಾಗಿದೆ. ಇದರ ಪ್ರಕಾರ ಅರ್ಹಂತನು ದೇಹ ಮನಸ್ಸುಗಳು ಲಯಗೊಂಡ ಮೇಲೆ ಶೂನ್ಯವನ್ನು ತಲುಪುತ್ತಾನೆ. ಇದಕ್ಕೆ ಪರಿನಿರ್ವಾಣವೆಂದು ಕರೆಯುತ್ತಾರೆ. ಇದು ವಿದೇಹ ಮುಕ್ತಿಯ ಕಲ್ಪನೆಯನ್ನು ಹೋಲುತ್ತದೆ.

ಬೌದ್ಧರು ಜನ್ಮಾಂತರವನ್ನು ನಂಬುತ್ತಾರೆ. ಆದರೆ ಶಾಶ್ವತ ವಾದ ಆತ್ಮವನ್ನು ಅವರು ನಿರಾಕರಿಸುವುದರಿಂದ ಅವರ ಈ ನಂಬಿಕೆಯು ವಿರೋಧಾಭಾಸವೆನಿಸುತ್ತದೆ. ಈ ವಿರೋಧಾ ಭಾಸವನ್ನು ಡಾಯ್ಸನ್ ಸೇರಿದಂತೆ ಕೆಲವು ಆಧುನಿಕ ವಿದ್ವಾಂಸರು ಎತ್ತಿತೋರಿಸುತ್ತಾರೆ. ಡಾಯ್ಸನ್ ಹೀಗೆ ಹೇಳುತ್ತಾರೆ, "ಕರ್ಮವನ್ನು ಅನುಭವಿಸುವ ಪ್ರತಿಸಂದರ್ಭದಲ್ಲೂ ಒಬ್ಬ ವ್ಯಕ್ತಿ ಇರಲೇಬೇಕು". ಆದರೆ ಪ್ರೊಫೆಸರ್ ಹಿರಿಯಣ್ಣನವರು ಈ ವಿಷಯದಲ್ಲಿ ಯಾವ ವಿರೋಧಾಭಾಸವನ್ನೂ ಕಾಣುವು ದಿಲ್ಲ. ಅವರ ಪ್ರಕಾರ ಕರ್ತೃವಿಲ್ಲದೇ ಕರ್ಮವು ಇರಬಹು ದಾದರೆ ಜನ್ಮಾಂತರ ಪಡೆಯುವ ವಸ್ತುವಿಲ್ಲದೆ ಜನ್ಮಾಂತರವೂ ಇರಲು ಸಾಧ್ಯವುಂಟು. ಅಲ್ಲದೆ ಬೌದ್ಧ ಧರ್ಮದ ಪ್ರಕಾರ ಜನ್ಮಾಂತರವುಂಟಾಗುವುದು, ಇತರ ಭಾರತೀಯ ದರ್ಶನಗಳು ಹೇಳುವಂತೆ, ಈ ಜೀವನದ ಕೊನೆಯಲ್ಲಿ ಮಾತ್ರವೇ ಅಲ್ಲ, ಅದು ಪ್ರತಿಕ್ಷಣದಲ್ಲೂ ಉಂಟಾಗುತ್ತದೆ. ಬೆಳಕು ಮತ್ತು ಶಾಖಗಳ ವರ್ಗಾವಣೆಯಾಗುವುದು ಒಂದು ದೀಪದಿಂದ ಮತ್ತೊಂದು ದೀಪವನ್ನು ಹೊತ್ತಿಸಿದಾಗ ಮಾತ್ರವಲ್ಲ, ಅದು ಪ್ರತಿಕ್ಷಣದಲ್ಲೂ ಆಗುವುದು. ಮೊದಲನೆಯದರ ವಿಷಯದಲ್ಲಿ ಜ್ಯೋತಿಗಳ ಹೊಸ ಶ್ರೇಣಿಯೊಂದು ಪ್ರಾರಂಭವಾಗುವುದಷ್ಟೇ. ವಾಸ್ತವವಾಗಿ ಪ್ರತಿಯೊಂದು ಜ್ಯೋತಿಯೂ ನಿರಂತರ ಶ್ರೇಣಿಯನ್ನು ಪ್ರತಿಬಿಂಬಿಸುತ್ತದೆ. ಒಬ್ಬ ವ್ಯಕ್ತಿಗೆ ಸೇರಿದ ಕರ್ಮವು ಬದುಕಿನಲ್ಲಿ ಹೇಗೋ ಹಾಗೆಯೇ ಮರಣ ಸಮಯದಲ್ಲೂ ಇನ್ನೊಂದಕ್ಕೆ ವರ್ಗಾವಣೆ ಹೊಂದಬಹುದು. ಸತ್ತವನೇ ಮತ್ತೆ ಹುಟ್ಟದಿರಬಹುದು. ಆದರೆ ಅದೇ ಸಂಸ್ಕಾರವುಳ್ಳ ಮತ್ತೊಬ್ಬನು ಹುಟ್ಟಬಹುದು. ಆದ್ದರಿಂದ ಪುನರ್ಜನ್ಮವಿರುವುದು ಸಂಸ್ಕಾರ ಮತ್ತು ಚಾರಿತ್ರ್ಯಕ್ಕೆ ಹೊರತು ಆತ್ಮಕ್ಕಲ್ಲ. ಈ ಚಾರಿತ್ರ್ಯವು ವ್ಯಕ್ತಿಯು ಸತ್ತ ನಂತರವೂ ಜೀವಂತವಾಗಿರುತ್ತದೆ. ತನ್ನ ಶಕ್ತಿಯಿಂದ ಅದು ಇನ್ನೊಂದು ಜೀವಿಯನ್ನು ಅಸ್ತಿತ್ವಕ್ಕೆ ತರುತ್ತದೆ.

ಒಟ್ಟಾರೆ, ಬೌದ್ಧರ ಪ್ರಕಾರ ನಾವು ಮಾಡುವ ಯಾವ ಕರ್ಮವೂ ತನ್ನ ಫಲವನ್ನು ಉಳಿಸದೇ ಅದೃಶ್ಯವಾಗುವುದಿಲ್ಲ. ಬುದ್ಧನು ಈ ಕರ್ಮಸಿದ್ಧಾಂತವನ್ನು ಎಲ್ಲ ಬಗೆಯ ಪಾರಲೌಕಿಕ ವರ್ಣನೆಗಳಿಂದ ದೂರವಿರಿಸಿದ. ಹಿಂದೂ ದೃಷ್ಟಿಯ ಪ್ರಕಾರ ವ್ಯಕ್ತಿಗೆ ಆತನ ಪೂರ್ವಕರ್ಮಗಳಿಗೆ ಅನುಸಾರವಾಗಿ ನೋವು ನಲಿವುಗಳನ್ನು ನೀಡುವುದು ದೇವರು. ಜೈನ ಧರ್ಮವು ದೇವರನ್ನು ನಿರಾಕರಿಸಿದರೂ,

ಕರ್ಮವು ಆತ್ಮಕ್ಕೆ ಅಂಟಿಕೊಳ್ಳುತ್ತದೆ ಎಂದು ಹೇಳುತ್ತದೆ. ಅದರ ದೃಷ್ಟಿಯಲ್ಲಿ ಕರ್ಮಫಲವನ್ನು ಭೋಗಿಸುವ ಸ್ಥಿರ ಆತ್ಮವುಂಟು. ಬುದ್ಧನು ಈ ಎರಡೂ ದೃಷ್ಟಿಗಳನ್ನು ನಿರಾಕರಿಸಿದ. ಆತನ ಪ್ರಕಾರ ಕರ್ಮಫಲವನ್ನು ನೀಡುವ ದೇವರು ಎಂಬ ತತ್ತ್ವ ಇಲ್ಲ. ಕರ್ಮವು ಲೌಕಿಕ ವಲಯದಲ್ಲಿದ್ದು ತನ್ನ ಸ್ವಭಾವದ ಪ್ರಕಾರ ಕ್ರಿಯಾಶೀಲವಾಗಿರುವ ಒಂದು ಅಪೌರುಷ ನಿಯಮ.

ಬೌದ್ಧ ಧರ್ಮವು ವೈದಿಕ ರೀತಿಯ ಯಾಗ-ಯಜ್ಞಗಳ ವಿರುದ್ಧ ಪ್ರಾರಂಭವಾದ ಚಿಂತನೆ. ಕಾಲಾನುಕ್ರಮದಲ್ಲಿ ಈ ಧಾರ್ಮಿಕವಿಧಿಗಳು ಬುದ್ಧನ ಸುತ್ತ ಬೆಳೆದ ಆರಾಧನೆ, ನಂತರ ಪೂಜೆ, ವಿಗ್ರಹ, ದೇವಸ್ಥಾನಗಳಿಗೆ ದಾರಿ ಮಾಡಿಕೊಟ್ಟದ್ದು ಕುತೂಹಲಕಾರಿಯಾದ ವಿಚಾರ. ಹಿಂದೂ ಧರ್ಮವೂ ಬೌದ್ಧರಿಂದ ಅನೇಕ ವಿಚಾರಗಳನ್ನು ಎರವಲು ಪಡೆದು ಸಮೃದ್ಧವಾಗಿದೆ. ಬೌದ್ಧಯುಗ ಭಾರತದ ಇತಿಹಾಸದ ಮೇಲೆ ಆಳವಾದ ಪ್ರಭಾವವನ್ನು ಬೀರಿದ ಯುಗ ಎಂದು ಹೇಳಲಾಗಿದೆ. ✪

## ಪ್ರಹಸನ ಪ್ರಸಂಗ

ಸುಮಾರು ನೂರು ವರ್ಷಗಳ ಹಿಂದೆ ಅಮೆರಿಕ ದೇಶದಲ್ಲಿ ಪ್ರಖ್ಯಾತ ಶ್ರೀಮಂತರಾಗಿದ್ದ ರಾಕ್‌ಫೆಲರ್ ಅವರಿಗೆ ಅವರ ಇನ್ನೊಬ್ಬ ಶ್ರೀಮಂತ ಗೆಳೆಯ ಹೇಳಿದ: "ನೋಡು, ಆ ಫ್ರಾಂಕ್ಲಿನ್ ಕಳೆದ ಆರು ತಿಂಗಳ ಹಿಂದೆ ನನ್ನಿಂದ ಮೂವತ್ತು ಸಾವಿರ ಡಾಲರ್ ಸಾಲ ತೆಗೆದುಕೊಂಡ; ಈವರೆಗೂ ಅಸಲು ಇರಲಿ, ಬಡ್ಡಿಯನ್ನೂ ಚುಕ್ತಾ ಮಾಡಿಲ್ಲ. ಕೇಳಿದರೆ ಏನೇನೋ ಸಬೂಬು ಹೇಳುತ್ತಾನೆ. ಏನು ಮಾಡಬೇಕೆಂದು ಯೋಚನೆಯಾಗಿದೆ."

"ಹಾಗಾದರೆ ಅವನ ಮೇಲೆ ಕೇಸು ಹಾಕು," ಎಂದ ರಾಕ್‌ಫೆಲರ್.

"ಅದು ಅಷ್ಟು ಸರಳವಾಗಿದ್ದರೆ ನಾನೇಕೆ ನಿನ್ನನ್ನು ಕೇಳಬೇಕಾಗಿತ್ತು. ಅಸಲು ವಿಷಯವೆಂದರೆ, ನಾನು ದುಡ್ಡು ಕೊಟ್ಟದ್ದಕ್ಕೆ ಅವನಿಂದ ಪತ್ರವನ್ನೂ ಬರೆಸಿಕೊಂಡಿಲ್ಲ!" ಎಂದು ಗೆಳೆಯ ತನ್ನ ಪೇಚಾಟವನ್ನು ತೋಡಿಕೊಂಡ.

"ಹಾಗೋ?" ಚಾಣಾಕ್ಷ ರಾಕ್‌ಫೆಲರ್ ಹೇಳಿದ: "ಈಗಲೂ ಕಾಲ ಮಿಂಚಿಲ್ಲ. ಈಗಿಂದ ಈಗಲೇ ಅವನಿಗೊಂದು ಪತ್ರ ಬರೆದು, 'ನನಗೆ ಕೊಡಬೇಕಾದ ಅರವತ್ತು ಸಾವಿರ ಡಾಲರ್‌ಗಳನ್ನು ಒಂದು ತಿಂಗಳೊಳಗಾಗಿ ಬಡ್ಡಿ ಸಮೇತ ವಾಪಸು ಮಾಡದಿದ್ದರೆ ಕೇಸು ಹಾಕುತ್ತೇನೆ' ಎಂದು ತಿಳಿಸು."

"ಅದ್ಹೇಗೆ ಆಗುತ್ತದೆ? ನಾನು ಕೊಟ್ಟದ್ದು ಮೂವತ್ತು ಸಾವಿರ. ಈಗ ಅರವತ್ತು ಸಾವಿರ ಅಂತ ಬರೆದರೆ ತಪ್ಪಾಗುವುದಿಲ್ಲವೆ?" ಗೆಳೆಯ ಕೇಳಿದ.

"ಅಯ್ಯೋ ಪೆದ್ದ! ನಿನ್ನ ಧರ್ಮಬುದ್ಧಿಯನ್ನು ಆಚೆ ಇಡು. ಆನೆಯನ್ನು ಖೆಡ್ಡಾಕ್ಕೆ ಬೀಳಿಸಬೇಕಾದರೆ ಇದೇ ಉಪಾಯ! ನಿನ್ನ ಕಾಗದ ನೋಡಿದ ಕೂಡಲೆ ಆತ ಕೆಂಡಾಮಂಡಲ ಕೋಪದಿಂದ ಉತ್ತರ ಬರೆಯುತ್ತಾನೆ: 'ನೀನು ಮೋಸಗಾರ! ನಾನು ನಿನ್ನಿಂದ ತೆಗೆದುಕೊಂಡಿದ್ದು ಮೂವತ್ತು ಸಾವಿರ; ಈಗ ಅರವತ್ತು ಸಾವಿರ ಅಂತ ಬರೀತೀಯಾ? ನೀನಿಂತಹವನು ಎಂದು ಮೊದಲೇ ಗೊತ್ತಾಗಿದ್ದರೆ, ನಿನ್ನ ಹತ್ತಿರ ವ್ಯವಹಾರವನ್ನೇ ಮಾಡುತ್ತಿರಲಿಲ್ಲ..' ಈ ಬೇಸರಿಕೆಯ ಉತ್ತರವೇ ನಿನಗೆ ಆಧಾರಪತ್ರವಾಗುತ್ತದೆ. ಅನಂತರ ನಿರಾಯಾಸವಾಗಿ ಅವನನ್ನು ಕೋರ್ಟಿಗೆ ಎಳೆಯಬಹುದಲ್ಲ!" ರಾಕ್‌ಫೆಲರ್ ವಿವರಿಸಿದರು.

"ಎಲಾ, ನಿನ್ನ ಬುದ್ಧಿಯೆ!" ಎನ್ನುತ್ತಾ ಗೆಳೆಯ ಮೂಗಿನ ಮೇಲೆ ಬೆರಳಿಟ್ಟುಕೊಂಡ.

❄ ❄ ❄

ಈ ರಾಕ್‌ಫೆಲರ್‌ನ ಮೊಮ್ಮಗಳು ಶಾಲೆಯಲ್ಲಿ ಆರನೆಯ ತರಗತಿಯಲ್ಲಿ ಓದುತ್ತಿದ್ದಳು. ಒಂದು ದಿನ ಉಪಾಧ್ಯಾಯಿನಿ 'ಬಡತನ'ದ ಬಗ್ಗೆ ಒಂದು ಪ್ರಬಂಧ ಬರೆಯಲು ವಿದ್ಯಾರ್ಥಿನಿಯರಿಗೆ ಹೇಳಿದರು. ಬಡತನವೆಂದರೆ ಏನೆಂಬುದೇ ಅರಿಯದ ಆ ಬಾಲಕಿ ಈ ರೀತಿ ಬರೆದಳು: ಒಂದು ಊರಿನಲ್ಲಿ ಒಬ್ಬ ತುಂಬಾ ಬಡವನಿದ್ದನು. ಅವನ ಮನೆಯ ತೋಟದಲ್ಲಿ ಕೆಲಸ ಮಾಡುತ್ತಿದ್ದ ಮಾಲಿಯೂ ತುಂಬಾ ಬಡವನಾಗಿದ್ದನು. ಮನೆಗೆ ಅಡುಗೆ ಕೆಲಸಕ್ಕೆ ಬರುತ್ತಿದ್ದ ಅಡುಗೆಯವನೂ ತುಂಬಾ ಬಡವನಾಗಿದ್ದನು. ಅಷ್ಟೇ ಅಲ್ಲ, ಆ ಮನೆಯ ಕುದುರೆಗಾಡಿ ನಡೆಸುತ್ತಿದ್ದ ಚಾಲಕನೂ ತುಂಬಾ ಬಡವನಾಗಿದ್ದನು, ಇತ್ಯಾದಿ ಇತ್ಯಾದಿ!

—ಸಂಗ್ರಹ : ಎನ್ ಗೋಪಿನಾಥ

❄ ❄ ❄

ಗಾಂಪನೊಬ್ಬ ಕುದುರೆಯನ್ನೇರಿ ವೇಗವಾಗಿ ಹೋಗುತ್ತಿದ್ದ. ದಾರಿಯಲ್ಲಿದ್ದ ಸ್ನೇಹಿತನ ಮನೆ ಮುಂದೆ ಬಂದಾಗ ಅವನು ಕೇಳಿದ: "ಎತ್ತ ಹೋಗುತ್ತಿರುವೆ?" ಗಾಂಪ ಹೇಳಿದ, 'ನನ್ನನ್ನೇಕೆ ಕೇಳುವೆ? ಕುದುರೆಯನ್ನು ಕೇಳು!"